ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 4404-2023

ಸಿ.ಡಬ್ಲ್ಯೂ -05
ಪಿ.ಡಬ್ಲ್ಯೂ-07

ಸಾಕ್ಷಿದಾರನ ಹೆಸರು :- ಜಯಮ್ಮಾ
ಗಂಡನ ಹೆಸರು :- ಚಂದ್ರಯ್ಯ
ವಯಸ್ಸು :- 40 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಹೊನ್ನೆಗೌಡನಪಾಳ್ಯ

**ಸಾಕ್ಷಿಗೆ ದಿಃ 10.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸ್ಥಳ ಪಂಚನಾಮೆಗೆ ನನ್ನ ಸಹಿ ಇರುತ್ತದೆ. ದಿಃ 13.07.2022 ರಂದು ಗಂಗಮ್ಮಾ ಅವರ ಜಮೀನಿನ ಬಳಿ ಸಹಿ ಮಾಡಿದ್ದು ಆ ಸಮಯದಲ್ಲಿ ಚಾಸಾ 1 ಮತ್ತು 6 ಸಹ ಇದ್ದರು. ಆಗ 11.45 ರಿಂದ 12.45ರ ಸಮಯ ಆಗಿತ್ತು. ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ಪೋಲಿಸರು ದೊಣ್ಣೆ ಮತ್ತು ಕಲ್ಲನ್ನು ಪರಿಶೀಲನೆ ಮಾಡಿ ತಗೆದುಕೊಂಡು ಹೋಗುವುದಾಗಿ ಹೇಳಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ಥಳ ಪಂಚನಾಮೆಗೆ ಇರುವ ಸಹಿಯನ್ನು ನಿ.ಪಿ 2(ಸಿ) ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಗುರುತಿಸುತ್ತೇನೆ.

**ಆರೋಪಿ ಪರಃ ಪಾಟೀ ಸವಾಲುಃ ಬಿ.ಆರ್.ಆರ್ ವಕೀಲರಿಂದಃ**

ಆರೋಪಿತರಿಗೂ ನಮಗೂ 10 ವರ್ಷಗಳಿಂದ ಮಾತುಕತೆ ಇರುವುದಿಲ್ಲ. ಈ ವಿಚಾರವನ್ನು ನಾನು ಪೋಲಿಸರು ಬಂದಾಗ ಹೇಳಿರುವುದಿಲ್ಲ. ಪೋಲಿಸರು ಮಹಜರಗೆ ಬರುವಂತೆ ನೋಟಿಸ್ ನೀಡಿರುವುದಿಲ್ಲ. ಯಾವ ಉದ್ದೇಶಕ್ಕೆ ಬಂದಿರುತ್ತೇವೆಂಬ ವಿವರಣೆಯನ್ನು ನನಗೆ ಓದಿ ಹೇಳಿರುತ್ತಾರೆ. ಮಹಜರನಲ್ಲಿ ಏನು ಬರೆದಿದೆ ಎಂದು ನನಗೆ

ಗೊತ್ತಿಲ್ಲ. ಮಹಜರನ್ನು ಎಲ್ಲಿ ತಯಾರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಆದರೆ ನಾವು 3 ಜನ ಸಹಿ ಮಾಡಿರುತ್ತೇವೆಂದು ಹೇಳುತ್ತಾರೆ. ಸಾಕ್ಷಿಗೆ ನಿ.ಪಿ 2 ಅನ್ನು ತೋರಿಸಿ 4 ಸಹಿಗಳು ಇದ್ದು ಅವುಗಳನ್ನು ಎಲ್ಲಿ ಹಾಕಿರತ್ತೀರಿ ಎಂದು ಕೇಳಿದಾಗ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಚಾಸಾ 1 ಅವರು ದೂರನ್ನು ನೀಡುವ ಸಮಯದಲ್ಲಿ ದೊಣ್ಣೆ ಮತ್ತು ಕಲ್ಲನ್ನು ತಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಅವುಗಳನ್ನೇ ಪೋಲಿಸರೆ ತೋರಿಸಿರುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ ಹೇಳುವ ದಿನಾಂಕ ಮತ್ತು ಸಮಯದಲ್ಲಿ ಸ್ಥಳಕ್ಕೆ ಬಂದಿಲ್ಲ ನಾನು ಪೋಲಿಸ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ನನಗೂ ಮಾತುಕತೆ ಇರುವುದಿಲ್ಲ ನಾನು ಅವರ ಮೇಲಿನ ದ್ವೇಷದಿಂದ ಸಹಿ ಮಾಡುತ್ತೇನೆಂದು ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.